

بِسْمِ اللّٰهِ الرَّحْمٰنِ الرَّحِيمِ

# ಜರ್ಮನ್ ಜಲ್ಸ ಕುರಿತು ಅನ್ಯರ ಅಮೂಲ್ಯ ಅಭಿಪ್ರಾಯಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಜರ್ಮನಿಯ **'ಬೈತುಸ್ಸುಬೂಹ್'** ನಿಂದ **09-09-2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನ ಅನುಗ್ರಹದಿಂದ ಜಮಾಅತ್ ಅಹ್ಮದಿಯಾ ಜರ್ಮನಿಯ ಜಲ್ಸ ಸಾಲಾನ ಮೂರು ದಿನಗಳ ಧಾರಾಳ ಕಾರ್ಯಕ್ರಮಗಳೊಂದಿಗೆ ಕಳೆದ ರವಿವಾರ ಮುಕ್ತಾಯಗೊಂಡಿತು. ಎಲ್ಲ ಕಾರ್ಯಕರ್ತರೂ ನಮ್ಮ ಕೃತಜ್ಞತೆಯರ್ಪಣೆಗೆ ಅರ್ಹರಾಗಿದ್ದಾರೆ. ಅಲ್ಲಾಹನು ಅವರಿಗೆಲ್ಲ ಉತ್ತಮ ಪ್ರತಿಫಲ ನೀಡಲಿ. ನಾನು ಸಹ ಎಲ್ಲಾ ಕಾರ್ಯಕರ್ತರಿಗೆ ಕೃತಜ್ಞತೆ ಅರ್ಪಿಸುತ್ತೇನೆ. ಅವರೆಲ್ಲರಿಗೂ ಮುಂದೆ ಇನ್ನಷ್ಟು ಉತ್ತಮ ರೀತಿಯ ಸೇವೆ ಮಾಡುವ ಭಾಗ್ಯ ಅಲ್ಲಾಹನು ದಯಪಾಲಿಸಲಿ.

ಜಲ್ಸದ ವೇಳೆ ಅನ್ಯರ ಮೇಲೆ ಅದು ಬೀರಿದ ಪ್ರಭಾವದ ಬಗ್ಗೆ ಕೆಲವು ಘಟನೆಗಳನ್ನು ನಿಮ್ಮ ಮುಂದೆ ಇರಿಸುತ್ತೇನೆ. ಬೋಸ್ನಿಯಾ ದೇಶದಿಂದ ಇಬ್ರಾಹೀಮೋ ಎಂಬ ಒಬ್ಬರು ಅತಿಥಿಯಾಗಿ ಆಗಮಿಸಿದ್ದರು. ಅವರು ಹೇಳಿದರು: ಅಹ್ಮದಿಯತ್ ವಾಸ್ತವಿಕ ಸತ್ಯವಾಗಿದೆ. ಅದು ಪವಿತ್ರ ಖುರ್‌ಆನಿನ ಉಪದೇಶಗಳನ್ನು ಅನುಷ್ಠಾನಕ್ಕೆ ತರುತ್ತಿದೆ. ಖಲೀಫತುಲ್ ಮಸೀಹರ ಭಾಷಣಗಳು ನನ್ನ ಮೇಲೆ ಎಲ್ಲಕ್ಕಿಂತ ಹೆಚ್ಚು ಪ್ರಭಾವ ಬೀರಿದುವು. ನನ್ನ ಹೃದಯ ಎಲ್ಲ ವಿಧಗಳಲ್ಲಿಯೂ ಸಮಾಧಾನ ಪಡೆಯಿತು. ನಾನು ಬೈಅತ್ ಮಾಡಿ ಅಹ್ಮದಿಯ್ಯತ್‌ನಲ್ಲಿ ಪ್ರವೇಶಿಸಿದೆ. ನಿಮ್ಮ ವ್ಯವಸ್ಥೆ, ಪ್ರೀತಿ ಮತ್ತು ಶಾಂತಿ ನನ್ನನ್ನು ತಮ್ಮ ಪ್ರೇಮಿಯನ್ನಾಗಿ ಮಾಡಿತು.

ಇರಾಕ್‌ನಿಂದ ಆಗಮಿಸಿದ ರಿಯಾಝ್ ಸಾಹೇಬ್ ಹೇಳುತ್ತಾರೆ: ಜಲ್ಸ ಸಾಲಾನದ ದೃಶ್ಯ ನನಗೆ ಅತ್ಯಂತ ಆಶ್ಚರ್ಯಕರವಾಗಿತ್ತು. ಸಹೋದರ ಭಾವನೆ ಮತ್ತು ಭ್ರಾತೃತ್ವದ ಇಲ್ಲಿನ ಪರಿಸರ ಲೋಕದಲ್ಲಿ ಅಹ್ಮದಿಯ್ಯತ್ತಿನಲ್ಲಿ ಹೊರತು ಬೇರೆಲ್ಲಿಯೂ ಕಾಣಿಸಲಾರದು. ನನಗೆ ಎಲ್ಲ ದಿಕ್ಕುಗಳಲ್ಲಿಯೂ ಪ್ರೀತಿಯೇ ಕಾಣಿಸಿತು. ಖಲೀಫರ ಭಾಷಣಗಳು ಹೃತ್ಪೂರ್ವಕ ಭಾವನೆಗಳನ್ನು ಪ್ರತಿಬಿಂಬಿಸುತ್ತಿದ್ದುವು. ನಾನು ಆಣೆ ಹಾಕಿ ಹೇಳುತ್ತೇನೆ. ಇಸ್ಲಾಮಿನ ಈ ಅತ್ಯಂತ ಸುಂದರ ಚಿತ್ರ ಇತರ ಯಾವುದೇ ಪಂಗಡದ ಬಳಿ ಇಲ್ಲ. ಆದುದರಿಂದ ಎಲ್ಲವನ್ನೂ ಕಣ್ಣಾರೆ ಕಂಡನಂತರ ನನಗೆ ಮತ್ತು ನನ್ನ ಕುಟುಂಬಕ್ಕೆ ಅಹ್ಮದಿಯ್ಯತ್ತನ್ನು ಸ್ವೀಕರಿಸಲು ಯಾವ ಸಂಕೋಚವೂ ತಲೆದೋರಲಿಲ್ಲ. ನಾವು ಮರಳಿ ಹೋಗಿ ನಮ್ಮ ಸಂಬಂಧಿಕರಿಗೆ ಈ ವಿಷಯ ತಿಳಿಸಿದಾಗ, ನಾವು ಅಹ್ಮದಿಯ್ಯತ್ತನ್ನು ಸ್ವೀಕರಿಸಿದ್ದೇವೆ ಎಂದು ಹೇಳಿದಾಗ, ಅವರು ಹೇಳಿದರು: ನೀವು ನಮಗೆ ಮೊದಲೇ ಏಕೆ ತಿಳಿಸಲಿಲ್ಲ. ನೀವು ನಮ್ಮನ್ನು ಸಹ ನಿಮ್ಮ ಜೊತೆ ಏಕೆ ಕರೆದುಕೊಂಡು ಹೋಗಲಿಲ್ಲ. ಈ ಎಲ್ಲಾ ವಿಷಯ ಕೇಳಿದಾಗ ನಾವು ಸಹ ಅಹ್ಮದಿಯಾ ಜಮಾಅತ್‌ಗೆ ಸೇರಲು ಬಯಸುತ್ತೇವೆ ಎಂದು ಅವರು ಹೇಳಿದ್ದಾಗಿ ತಿಳಿಸಿದರು.

ಸಲ್ಮಾನ್ ಸಾಹಿಬ್ ಎಂಬವರು ಹೀಗೆ ಹೇಳಿದರು: ಜಲ್ಸದ ಪರಿಸರ ನನ್ನ ಮೇಲೆ ಅತ್ಯಂತ ಹೆಚ್ಚು ಪ್ರಭಾವ ಬೀರಿದೆ. ಇಂತಹ ಸುವ್ಯವಸ್ಥಿತ ಸಮ್ಮೇಳನವನ್ನು ನಾನು ನನ್ನ ಆಯುಷ್ಕಾಲದಲ್ಲಿ ಇದರ ಮೊದಲು ಎಂದೂ ನೋಡಿರಲಿಲ್ಲ. ಜನರ ಸ್ವಭಾವಗುಣಗಳು, ಒಳ್ಳೆಯ ನಡೆವಳಿಕೆ, ಪ್ರೀತಿ, ವಾತ್ಸಲ್ಯ ಇವುಗಳೆಲ್ಲಾ ಈ ಕಾಲದಲ್ಲಿ ಅಹ್ಮದಿಯ್ಯತ್‌ನಲ್ಲಿ ಹೊರತು ಲೋಕದಲ್ಲಿ ಬೇರೆ ಎಲ್ಲಿಯೂ ಕಾಣಿಸುವುದಿಲ್ಲ. ಇವುಗಳನ್ನು ನೋಡಿದ ನಂತರ ನಾನು ಇಂದು ಅಹ್ಮದಿಯಾ ಜಮಾಅತ್‌ನಲ್ಲಿ ಪ್ರವೇಶಿಸುತ್ತೇನೆಂದು ಪ್ರಕಟಿಸುತ್ತೇನೆ.

ಬೋಸ್ನಿಯಾದ ಓರ್ವ ಅತಿಥಿ ಬಾಯಿರನ್ ಸಾಹೇಬ್ ಹೀಗೆ ಹೇಳಿದರು: ನಾನು ಪ್ರಥಮ ಬಾರಿ ಜಲ್ಸಕ್ಕೆ ಆಗಮಿಸಿದೆ. ಈ ಜಮಾಅತ್ ಸತ್ಯ ಜಮಾಅತ್ ಆಗಿದೆ. **ಸಿರಾತೆ ಮುಸ್ತಖೀಮ್**ನಲ್ಲಿ ನೆಲೆಗೊಂಡಿದೆ. ಜಲ್ಸದಲ್ಲಿ ಖಲೀಫರ ಭಾಷಣ ಆಲಿಸಿದಾಗ ಅವರ ಕೈಯಲ್ಲಿ ಬೈಅತ್ ಮಾಡಲು ನಾನು ನಿರ್ಧರಿಸಿದೆ. ಹಾಗೆ ನಾನು ಬೈಅತ್ ಮಾಡಿ ಅಹ್ಮದಿಯಾ ಜಮಾಅತ್‌ನಲ್ಲಿ ಸೇರಿರುವೆನು.

ಬೆಲ್‌ಜಿಯಮ್ ದೇಶದಿಂದ ಆಗಮಿಸಿದ ಗರ್‌ಯೂ ಸಾಹೇಬ್ ಹೀಗೆ ಹೇಳುತ್ತಾರೆ: ನಾನು ಎಲ್ಲ ಮುಸ್ಲಿಮರೊಂದಿಗೆ ಹೇಳಲು ಬಯಸುತ್ತೇನೆ. ಇದೇ ನಿಜವಾದ ಇಸ್ಲಾಮ್ ಧರ್ಮವಾಗಿದೆ. ಈ ಇಸ್ಲಾಮ್‌ನಲ್ಲಿ ಎಂದರೆ ಅಹ್ಮದಿಯತ್‌ನಲ್ಲಿ ಸೇರಿರಿ. ನಾನು ಈ ದಿನ ಬೈಅತ್ ಮಾಡಲು ಖಲೀಫರವರ ಮುಂದೆ ಹಾಜರಾಗಿರುವುದು ಅವಿಶ್ವಸನೀಯವಾದ ವಿಷಯವಾಗಿದೆ. ಹದಿನಾಲ್ಕನೆಯ ಪ್ರಾಯದಿಂದ ನನಗೆ ನೆನಪಿದೆ. ಮೌಲವಿಗಳಿಂದ ಹದೀಸುಗಳನ್ನು ಆಲಿಸಿ **ಮಹ್‌ದಿಯೆ ಮುಂತಝರ್** ಆಗಮಿಸುವ ಬಗ್ಗೆ ತಿಳಿದಿದ್ದೆ. ಇಂದು ನನ್ನ ಆ ಅಭಿಲಾಷೆ ಈಡೇರಿತು. ನಾನು ಎಲ್ಲವನ್ನೂ ಕಣ್ಣಾರೆ ಕಂಡೆನು.

ಮೆಸಿಡೋನಿಯಾ ದೇಶದ ಕ್ರೈಸ್ತ ಜರ್ನಲಿಸ್ಟ್ ಆದ ಟೋನಿ ಎಂಬವರು ಜಲ್ಸದ ಬಗ್ಗೆ ಹೀಗೆ ಹೇಳಿದರು: ನನ್ನ ಪ್ರಾಯ ಐವತ್ತೆರಡು ವರ್ಷ. ನನ್ನ ಆಯುಷ್ಕಾಲದಲ್ಲಿ ಎಲ್ಲಿಯೂ ಇಷ್ಟು ಸುವ್ಯವಸ್ಥಿತ ಸಮ್ಮೇಳನವನ್ನು ನಾನು ಕಾಣಲಿಲ್ಲ. ಜಲ್ಸದ ವ್ಯವಸ್ಥೆಯಲ್ಲಿ ನಾನು ಯಾವುದೇ ನ್ಯೂನತೆ ಕಾಣಲಿಲ್ಲ. ಯು.ಕೆ.ಯ ಜಲ್ಸದಲ್ಲಿ ಮತ್ತು ಇಲ್ಲಿನ ಜಲ್ಸದಲ್ಲಿ ಯಾವುದೇ ನ್ಯೂನತೆ ಇರಲಿಲ್ಲ.

ಜರ್ನಲಿಸ್ಟ್‌ಗಳು ಯಾವಾಗಲೂ ವಿಮರ್ಶಾತ್ಮಕ ದೃಷ್ಟಿಕೋನ ಹೊಂದಿರುತ್ತಾರೆ. ಆದರೆ ಅವರಿಗೆ ನಮ್ಮ ಪ್ರತಿಯೊಂದು ಜಲ್ಸ ಒಂದೇ ರೀತಿ ಕಾಣಿಸುತ್ತಾ ಇರುವುದು ಅಹ್ಮದಿಯ್ಯತ್ತಿನ ಸೌಂದರ್ಯವಾಗಿದೆ.

ಮತ್ತೋರ್ವ ಅಹ್ಮದಿಯೇತರ ಮುಸ್ಲಿಮ್ ಜರ್ನಲಿಸ್ಟ್, ಸೀನಾದ್ ಸಾಹೇಬ್ ಹೀಗೆ ಹೇಳಿದರು: ಜಲ್ಸ ಸಾಲಾನದ ವ್ಯವಸ್ಥೆಯಿಂದ ನಾನು ಬಹಳ ಪ್ರಭಾವಿತನಾಗಿರುವೆನು. ಇಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಜನರು ಜಮಾಯಿಸಿದ್ದಾರೆ. ಎಲ್ಲಾ ಜನರು ಸುಸಂಸ್ಕೃತರಾಗಿದ್ದಾರೆ. ಯಾರ ಮುಖದಲ್ಲಿಯೂ ಸಿಟ್ಟಿನ ಭಾವನೆ ಅಥವಾ ತಾತ್ಸಾರದ ಚಿಹ್ನೆಗಳು ಇಲ್ಲ. ಖಲೀಫರ ಭಾಷಣಗಳು ಶಕ್ತಿದಾಯಕವಾಗಿದ್ದುವು ಮತ್ತು ಅವು ಎಲ್ಲರ ಮೇಲೆ ಪ್ರಭಾವ ಬೀರುತ್ತಿತ್ತು. ಅವರ ಭಾಷಣಗಳು ಜನರ ಹೃದಯಗಳನ್ನು ತಲಪುತ್ತಿದ್ದುವು. ನನ್ನ ಜೊತೆ ಒಬ್ಬ ಕ್ರೈಸ್ತ ಮಿತ್ರರು ಬಂದಿದ್ದರು. ಅವರು ಜಲ್ಸದ ಆರಂಭದ ಮೊದಲುಗೊಂಡು ಎಷ್ಟು ಪ್ರಭಾವಿತರಾದರೆಂದರೆ ಅದನ್ನು ವಿವರಿಸಲು ಶಬ್ದಗಳು ದೊರಕುವುದಿಲ್ಲ.

ಬೋಸ್ನಿಯಾದಿಂದ ಆಗಮಿಸಿದ ಡಾಕ್ಟರ್ ಆದಿಲ್ ಸಾಹಿಬ್ ಹೀಗೆ ಹೇಳಿದರು: ಜಲ್ಸದ ವ್ಯವಸ್ಥೆ ಮತ್ತು ಕಾರ್ಯಕ್ರಮಗಳು ಅನನ್ಯವಾಗಿದ್ದುವು. ನಾನು ಡಾಕ್ಟರ್ ಎಂಬ ನೆಲೆಯಲ್ಲಿ ಕಳೆದ

ಇಪ್ಪತ್ತೈದು ವರ್ಷಗಳಿಂದ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದೇನೆ. ಆದರೆ ಇಂತಹ ಸುವ್ಯವಸ್ಥೆ ಮತ್ತು ಶಿಸ್ತು ಬೇರೆ ಎಲ್ಲಿಯೂ ಕಾಣಲಿಲ್ಲ. ಇಸ್ಲಾಮಿನ ಅಸ್ತಿಭಾರವು ಅನುಸರಣೆ, ಸುವ್ಯವಸ್ಥೆ ಮತ್ತು ಶಿಸ್ತಿನಲ್ಲಿದೆ. ನಾನು ಇಲ್ಲಿನ ಜಲ್ಸದಲ್ಲಿ ಇದನ್ನೇ ಕಂಡೆನು.

ಡೇನಿಯಲ್ ಎಂಬ ಓರ್ವ ಅತಿಥಿ ಹೀಗೆ ಹೇಳಿದರು: ಇದು ಆಧ್ಯಾತ್ಮಿಕವಾಗಿ ಮೃತರಾದ ಸಾವಿರಾರು ಜನರನ್ನು ಜೀವಂತಗೊಳಿಸಿದ ಜಲ್ಸ ಆಗಿದೆ. ಆಧ್ಯಾತ್ಮಿಕವಾಗಿ ಮೃತರಾದವರಲ್ಲಿ ನಾನು ಸಹ ಒಬ್ಬನಾಗಿದ್ದೆ. ಜಲ್ಸದಲ್ಲಿ ಭಾಗವಹಿಸಿದ ನಂತರ ನನಗೆ ನವ ಜೀವನ ಲಭಿಸಿತು.

ಬೋಸ್ನಿಯಾದ ಓರ್ವ ಅಹ್ಮದಿಯೇತರ ವ್ಯಕ್ತಿ ನೂರಿಯಾ ಸಾಹಿಬ್ ಹೇಳಿದರು: ಜಲ್ಸದಲ್ಲಿ ಭಾಗವಹಿಸಿದ ನಂತರ ನನ್ನ ಹೃದಯದಲ್ಲಿ ವಿಚಿತ್ರವಾದೊಂದು ಸ್ಥಿತಿ ಉಂಟಾಗಿದೆ. ಅದನ್ನು ವಿವರಿಸಲಾರೆ. ನಾನು ಒಳಗಿನಿಂದ ಬದಲಾವಣೆ ಹೊಂದಿರುವೆನು. ರೊಮೇನಿಯಾದಲ್ಲಿ ಹೊಸದಾಗಿ ಬೈಅತ್ ಮಾಡಿದ ಫ್ಲೋರಿಯಾನ್ ಎಂಬವರು ಹೀಗೆ ಹೇಳುತ್ತಾರೆ: ಜಲ್ಸದ ಎಲ್ಲಾ ವ್ಯವಸ್ಥೆಗಳಿಂದ ನಾನು ಅತ್ಯಂತ ಹೆಚ್ಚು ಪ್ರಭಾವಿತನಾಗಿದ್ದೇನೆ. ಪ್ರತಿಯೊಂದು ವ್ಯವಸ್ಥೆ ಪರಿಪೂರ್ಣವೂ ಉತ್ತಮವೂ ಆಗಿತ್ತು. ಯಾವುದೇ ವ್ಯವಸ್ಥೆ ಬಗ್ಗೆ ಅದರಲ್ಲಿ ಯಾವುದಾದರೂ ನ್ಯೂನತೆ ಇದೆ ಎಂದು ಹೇಳಲು ಸಾಧ್ಯವಿರಲಿಲ್ಲ. ಪ್ರತಿಯೊಬ್ಬ ಕಾರ್ಯಕರ್ತ ತನ್ನ ಕರ್ತವ್ಯದಲ್ಲಿ ತಲ್ಲೀನನಾಗಿದ್ದನು. ಅತಿಥಿಗಳ ಬಗ್ಗೆ ಪ್ರೀತಿಯಿಂದ ವರ್ತಿಸುತ್ತಿದ್ದನು. ಬೈಅತ್ ಸಂದರ್ಭದಲ್ಲಿ ಸಂತೋಷದ ಅಲೆಯಿತ್ತು ಮತ್ತು ವಿವರಿಸಲಾಗದ ಅಪೂರ್ವ ಭಾವನೆ ಇತ್ತು. ಬೈಅತ್ ಸಂದರ್ಭದಲ್ಲಿ ನನಗೆ ರೋಮಾಂಚನವಾಯಿತು. ಒಂದು ಚುಂಬಕ ಕ್ಷೇತ್ರದಲ್ಲಿ ನಾವೆಲ್ಲರೂ ಇದ್ದೇವೆ, ನಾವೆಲ್ಲರೂ ಸೆಳೆಯಲ್ಪಡುತ್ತಿದ್ದೇವೆ ಎಂಬಂತೆ ಭಾಸವಾಗುತ್ತಿತ್ತು. ಈ ಜಲ್ಸ ನನಗೆ ಒಂದು ಸ್ವಪ್ನದೋಪಾದಿಯಲ್ಲಿದೆ.

ಬಲ್ಗೇರಿಯಾದಿಂದ 76 ಜನರ ಒಂದು ತಂಡ ಆಗಮಿಸಿತ್ತು. ಅದರಲ್ಲಿ 25 ಅಹ್ಮದಿಯರಿದ್ದರು. ಉಳಿದವರು ಅಹ್ಮದಿಯೇತರರಾಗಿದ್ದರು. ಅವರಲ್ಲಿ ಡಾಕ್ಟರ್‌ಗಳು, ವರ್ತಕರು, ಸೇನೆಯ ನಿವೃತ್ತ ಉನ್ನತ ಅಧಿಕಾರಿಗಳು ಇದ್ದರು. ಉಪಾಧ್ಯಾಯರುಗಳೂ ಇದ್ದರು. ಎಲ್ಲರೂ ವಿದ್ಯಾಸಂಪನ್ನರಾಗಿದ್ದರು. ಅವರ ಪೈಕಿ ಮೇಗಡ ಸಾಹಿಬ ಎಂಬ ಓರ್ವ ಮಹಿಳೆ ಈ ರೀತಿ ಹೇಳಿದರು: ಯುರೋಪಿಗೆ ಅನ್ಯ ದೇಶಗಳಿಂದ ಬಹಳಷ್ಟು ಜನರು ವಲಸೆ ಬರುತ್ತಿದ್ದಾರೆ. ಇದರಿಂದ ಒಂದು ತರಹದ ಅಸ್ವಸ್ಥ ವಾತಾವರಣ ಸೃಷ್ಟಿಯಾಗುತ್ತದೆ. ಆದರೆ, ನಿಮ್ಮ ಖಲೀಫರು ಈ ವಿಷಯದಲ್ಲಿ ನೀಡಿದ ವಿವರಣೆಯು ಮನಸ್ಸಿಗೆ ನೆಮ್ಮದಿಯನ್ನು ತರುವಂತಹದ್ದಾಗಿತ್ತು. ಎಲ್ಲ ರೀತಿಯ ಅಸಮಾಧಾನಗಳಿಗೆ ಅವರ ಮಾತಿನಲ್ಲಿ ಪರಿಹಾರವಿತ್ತು. ಅದೇ ರೀತಿ ಸ್ತ್ರೀಯರ ಮತ್ತು ಪುರುಷರ ಹಕ್ಕು ಬಾಧ್ಯತೆಗಳ ಬಗ್ಗೆ ಅವರು ನೀಡಿದ ವಿವಣೆಗಳಿಂದ ನಾನು ಬಹಳಷ್ಟು ಪ್ರಭಾವಿತಳಾಗಿದ್ದೇನೆ ಎಂದು ಹೇಳಿದರು.

ಮಾಲ್ಟಾದಿಂದ ಒಂದು ಪ್ರತಿನಿಧಿ ಸಂಘ ಆಗಮಿಸಿತ್ತು. ಅವರಲ್ಲಿ ಒಬ್ಬ ಡಾಕ್ಟರ್ ಇದ್ದರು. ಅವರು ಹೇಳುತ್ತಾರೆ: ಜಲ್ಸದಲ್ಲಿ ಖಲೀಫರ ಭಾಷಣಗಳು ಮತ್ತು ವಿಶಿಷ್ಟವಾಗಿ ಜಲ್ಸದ ದ್ವಿತೀಯ ದಿನ ಮುಸ್ಲಿಮೇತರರನ್ನು ಸಂಬೋಧಿಸಿ ಖಲೀಫರು ಮಾಡಿದ ಭಾಷಣ ಆಲಿಸಿದ ನಂತರ ನನಗೆ ನನ್ನ ಪ್ರಶ್ನೆಗಳಿಗೆ ಉತ್ತರ ಲಭಿಸಿದಂತೆ ಆಯಿತು. ಜಿಹಾದ್ ಬಗ್ಗೆ ಅಹ್ಮದಿಯಾ ಜಮಾಅತ್ ಮಾಡುವ ವ್ಯಾಖ್ಯಾನವನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿ ಮುಸ್ಲಿಮರಿಗೆ ಅದನ್ನು ಕಲಿಸಬೇಕಾದ ಆವಶ್ಯಕತೆಯಿದೆ. ಅದೇ ರೀತಿ ಮುಸ್ಲಿಮೇತರರಿಗೆ ಜಿಹಾದಿನ ವಾಸ್ತವಿಕತೆ ಏನೆಂದು ತಿಳಿಸಬೇಕು. ನಾನು ಮಾಲ್ಟಾದ ಜನರಿಗೆ ಅಹ್ಮದಿಯ್ಯತ್ತನ್ನು ಚೆನ್ನಾಗಿ ಪ್ರಚಾರ ಮಾಡುವೆನು. ಅಹ್ಮದಿಯಾ ಜಮಾಅತ್ ಪ್ರತಿಪಾದಿಸುವ ಇಸ್ಲಾಮ್ ಧರ್ಮವೇ ನೈಜ ಇಸ್ಲಾಮ್ ಧರ್ಮ ಎಂದು ಅವರಿಗೆ ನಾನು ಹೇಳಿಕೊಡುವೆನು.

ಲಾಟಿವಿಯಾದಿಂದ ಆಗಮಿಸಿದ ಒಬ್ಬ ವಕೀಲರು ಹೀಗೆ ಹೇಳಿದರು: ನಾನು ಪ್ರಥಮ ಬಾರಿ ಜಲ್ಸ ಸಾಲಾನಕ್ಕೆ ಆಗಮಿಸಿದ್ದೇನೆ. ನಿಮಗಿಂತ ಹೆಚ್ಚು ಪ್ರೀತಿಸುವ, ಸಹಾಯ ಮಾಡುವ, ಸೇವೆ ಮಾಡುವ ಜನರನ್ನು ನನ್ನ ಜೀವನದಲ್ಲಿ ಎಂದೂ ಕಾಣಲಿಲ್ಲ. ಜಲ್ಸದಲ್ಲಿ ಭಾಗವಹಿಸಿರುವುದು ನನಗೆ ಅಭಿಮಾನಕರವಾಗಿದೆ. ನಾನು ಮರಳಿ ಹೋಗಿ ನನ್ನ ಜೀವಿತದ ಬಗ್ಗೆ ಪುನರಾಲೋಚನೆ ಮಾಡುವೆನು ಎಂದು ಹೇಳಿದರು. ಒಬ್ಬ ಅತಿಥಿ ಮಹಿಳೆ ಟೀನಾ ಎಂಬವರು ಹೇಳಿದರು: ಜರ್ಮನಿಯ ಜಲ್ಸ ಸಾಲಾನದಲ್ಲಿ ಮಹಿಳೆಯರು, ಮಹಿಳೆಯರ ಹಕ್ಕುಗಳ ಬಗ್ಗೆ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಹಿಳೆಯರಿಗೆ ಮಾಡಿದ ಔದಾರ್ಯಗಳ ಬಗ್ಗೆ ಮಾಡಿದ ಭಾಷಣಗಳು ನನ್ನ ಮೇಲೆ ಬಹಳ ಉತ್ತಮ ಪ್ರಭಾವ ಬೀರಿದವು. ಇಸ್ಲಾಮ್ ಧರ್ಮದಲ್ಲಿ ಮಹಿಳೆಯರಿಗೆ ಎಂತಹ ಮಹತ್ವಪೂರ್ಣ ಸ್ಥಾನ ಇದೆ ಎಂದು ಈಗ ನಾನು ಹೇಳಬಲ್ಲೆನು.

ಬೆಲ್‌ಜಿಯಮ್‌ನಿಂದ ಆಗಮಿಸಿದ ಸೆನೆಗಲ್‌ನವರಾದ ಒಬ್ಬ ಅಹ್ಮದಿಯೇತರ ಅತಿಥಿ ಈ ರೀತಿ ಹೇಳಿದರು: ಇಲ್ಲಿನ ಸಮ್ಮೇಳನದ ಸುವ್ಯವಸ್ಥೆ ನಾನು ಬೇರೆ ಎಲ್ಲಿಯೂ ಕಾಣಲಿಲ್ಲ. ಇಂದಿನ ಕಾಲದಲ್ಲಿ ಇಸ್ಲಾಮಿನ ತತ್ವಗಳನ್ನು ಅನುಷ್ಠಾನಕ್ಕೆ ತರುತ್ತಿರುವವರು ಅಹ್ಮದಿಯಾ ಜಮಾಅತ್ ಮಾತ್ರ ಎಂದು ಕಾಣಿಸುತ್ತದೆ. ಲಿಥ್ವೇನಿಯಾದಿಂದ ಆಗಮಿಸಿದ ಒಬ್ಬ ಅತಿಥಿ ಮಹಿಳೆ ಹೇಳುತ್ತಾರೆ: ನಾನು ಈ ದಿನಗಳಲ್ಲಿ ಇಸ್ಲಾಮ್ ಬಗ್ಗೆ ಬಹಳಷ್ಟು ಕಲಿತೆನು. ಜನರ ಹಕ್ಕುಗಳನ್ನು ಈಡೇರಿಸಿ ಕೊಡುವ ಬಗ್ಗೆ ಇಸ್ಲಾಮ್ ವಿಶಿಷ್ಟವಾಗಿ ಗಮನ ಹರಿಸಿದೆ ಎಂದು ನಾನು ಅಂದಾಜು ಮಾಡಿದೆ. ನಾನು ಮರಳಿ ಹೋದ ನಂತರ ಇಸ್ಲಾಮ್ ಅಹ್ಮದಿಯತ್ತಿನ ಸಂದೇಶ ಅನ್ಯರಿಗೆ ತಲಪಿಸುವೆನು. ಜಲ್ಸದಲ್ಲಿ ಭಾಗವಹಿಸಿದ ನಂತರ ನಾನು ನನ್ನಲ್ಲಿ ಬಹಳ ದೊಡ್ಡ ಬದಲಾವಣೆಯಾದುದನ್ನು ಮನವರಿಕೆ ಮಾಡಿಕೊಂಡಿದ್ದೇನೆ.

ಇನ್ನೊಬ್ಬ ಅತಿಥಿ ಅರಾಲ್‌ಡೋ, ಅವರು ಒಬ್ಬ ಅಕೌಂಟೆಂಟ್ ಆಗಿದ್ದಾರೆ, ಅವರು ಹೇಳಿದರು: ಜಲ್ಸ ಸಾಲಾನ ನನ್ನ ಹೃದಯದಲ್ಲಿ ಮುಸ್ಲಿಮರ ಬಗ್ಗೆ ಪ್ರೀತಿಯನ್ನು ಹುಟ್ಟಿಸಿದೆ. ಮುಸ್ಲಿಮರು ಶಾಂತಿ ಪ್ರಿಯರಾಗಿದ್ದಾರೆ. ಅವರು ಯುದ್ಧವನ್ನು ಬಯಸುವುದಿಲ್ಲ. ISIS ಇಸ್ಲಾಮಿನ ವಾಸ್ತವಿಕ ಚಿತ್ರ ನೀಡುವುದಿಲ್ಲ ಎಂದು ಹೇಳಿದರು.

ಜಲ್ಸದ ದಿನಗಳಲ್ಲಿ ನಾವು ಜಲ್ಸದ ಅನುಗ್ರಹಗಳನ್ನು ಗಳಿಸುತ್ತೇವೆ. ಜಲ್ಸ ನಮ್ಮ ತರಬೇತಿಗೆ ಮತ್ತು ಅನ್ಯರಿಗೆ ತಬ್ಲೀಗ್ ಮಾಡಲು ಮಾರ್ಗವಾಗುತ್ತದೆ. ನಾವು ನಮ್ಮ ಲೋಪದೋಷಗಳ ಬಗ್ಗೆ ಸಹ ದೃಷ್ಟಿಯಿರಿಸಬೇಕಾಗಿದೆ. ಪ್ರತಿಸಲ ಎಲ್ಲ ಬಲಹೀನತೆಗಳ ಬಗ್ಗೆ ಪ್ರಸ್ತಾಪಿಸುವ ಆವಶ್ಯಕತೆ ಇಲ್ಲ. ಆದರೆ ನಮ್ಮಲ್ಲಿ ಬಲಹೀನತೆಗಳು ಇವೆ ಎಂಬುದು ಸತ್ಯವೇ ಆಗಿದೆ. ಯಾವುದೇ ವ್ಯವಸ್ಥೆ ಸಹ ಸಂಪೂರ್ಣವಾಗಿ ಪರಿಪೂರ್ಣವಾಗಲು ಸಾಧ್ಯವೇ ಇಲ್ಲ. ನಮ್ಮ ಬಲಹೀನತೆಗಳನ್ನು ಮರೆಮಾಡಿದ ಬಗ್ಗೆ ನಾವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕು. ಅದರೊಂದಿಗೆ ನಾವು ನಮ್ಮನ್ನು ಪರಿಶೋಧಿಸುವುದು ಸಹ ಆವಶ್ಯಕವಾಗಿದೆ. ವ್ಯವಸ್ಥಾಪಕರು ಲೋಪದೋಷಗಳನ್ನೂ

ಬಲಹೀನತೆಗಳನ್ನೂ ವಿಮರ್ಶಾತ್ಮಕ ದೃಷ್ಟಿಯಿಂದ ನೋಡಬೇಕು. ಎಲ್ಲಿ ನಮ್ಮ ವ್ಯವಸ್ಥೆ ಬಲಹೀನವಾಗಿತ್ತು ಎಂದು ಹುಡುಕಿ ಕಂಡು ಹಿಡಿಯಬೇಕು. ನಾವು ಒಂದು ರೆಡ್‌ಬುಕ್ ಬರೆಯಬೇಕು. ಅದರಲ್ಲಿ ನಾವು ಮಾಡಿದ ತಪ್ಪುಗಳನ್ನು ನಮೂದಿಸಬೇಕು ಮತ್ತು ಮುಂದಿನ ಸಲ ಆ ತಪ್ಪುಗಳು ಪುನರಾವರ್ತಿಸದಂತೆ ಜಾಗರೂಕತೆ ವಹಿಸಬೇಕು. ಈ ರೀತಿಯಲ್ಲಿ ನಮ್ಮ ವ್ಯವಸ್ಥೆಯನ್ನು ಉತ್ತಮ ಪಡಿಸಬಹುದಾಗಿದೆ. ಅಫ್‌ಸರೆ ಜಲ್ಸ ಸಾಲಾನ (ಜಲ್ಸ ಸಾಲಾನದ ಮುಖ್ಯಾಧಿಕಾರಿ) ಜಲ್ಸದ ನಂತರ ಎಲ್ಲ ವಿಭಾಗಗಳನ್ನು ಸಭೆಗೆ ಕರೆಯಬೇಕು. ಪ್ರತಿಯೊಂದು ವಿಭಾಗದ ಮುಖ್ಯಸ್ಥರು ತಮ್ಮ ವಿಭಾಗದಲ್ಲಿ ಕಂಡು ಬಂದ ನ್ಯೂನತೆಗಳನ್ನು ಬರೆದು ತರಬೇಕು. ದೋಷಗಳನ್ನು ಗುರುತಿಸಿ ಬರೆದು ತರಬೇಕು. ಆಗ ಪರಸ್ಪರ ಸಮಾಲೋಚನೆ ನಡೆಸಿ ಅತ್ಯುತ್ತಮ ಪರಿಹಾರ ಮಾರ್ಗ ಕಂಡುಕೊಳ್ಳಬಹುದಾಗಿದೆ. ಮುಂದಿನ ವರ್ಷ ಉತ್ತಮ ವ್ಯವಸ್ಥೆ ಆಗುವಂತೆ ಮಾಡಬಹುದಾಗಿದೆ. ಜನರು ಯಾವುದಾದರೂ ಸುಧಾರಣೆ ಬಯಸಿದರೆ ಅಥವಾ ಗಮನಾರ್ಹವಾದ ಯಾವುದಾದರೂ ವಿಷಯ ಪ್ರಸ್ತಾಪಿಸಿದರೆ ಕೂಡಲೆ ವಿಶಾಲ ಹೃದಯರಾಗಿ ಅವರ ದೂರನ್ನು ಪರಿಗಣಿಸಬೇಕು. ಮುಂದೆ ಶಕ್ತಿಯುತವಾದ ಯೋಜನೆ ರೂಪಿಸಿ ವ್ಯವಸ್ಥೆಯನ್ನು ಉತ್ತಮಗೊಳಿಸಬೇಕು. ಹೀಗೆ ಮಾಡುವ ಭಾಗ್ಯವನ್ನು ಅಲ್ಲಾಹನು ನಮಗೆ ನೀಡಲಿ.

ನನ್ನ ಈ ಪ್ರಯಾಣದ ಕಾಲದಲ್ಲಿ ಕೆಲವು ಮಸ್‌ಜಿದ್‌ಗಳಿಗೆ ಅಸ್ತಿಭಾರ ಹಾಕಲು ಮತ್ತು ಕೆಲವು ಮಸ್‌ಜಿದ್‌ಗಳನ್ನು ಉದ್ಘಾಟನೆ ಮಾಡಲು ಸಂದರ್ಭ ಲಭಿಸಿತು. ಇವು ಸಹ ತಬ್ಲೀಗ್ ಮಾಡಲು ಸಂದರ್ಭ ಒದಗಿಸುತ್ತವೆ. ಮುಸ್ಲಿಮೇತರರು ಆಗಮಿಸಿ ಇಸ್ಲಾಮಿನ ಬಗ್ಗೆ ಮಾಹಿತಿ ಪಡೆಯುವಾಗ ಅವರಿಗೆ ಬಹಳ ಆಶ್ಚರ್ಯವಾಗುತ್ತದೆ. ಇಸ್ಲಾಮ್ ಧರ್ಮದ ಈ ಪಾರ್ಶ್ವವನ್ನು ನಮಗೆ ಇಂದಿನ ತನಕ ಯಾರೂ ತೋರಿಸಿರಲಿಲ್ಲ ಎಂದು ಅವರು ಹೇಳುತ್ತಾರೆ. ಈಗ ಈ ವಿಷಯಕ್ಕೆ ಸಂಬಂಧಿಸಿ ಕೆಲವು ಜನರ ಅಭಿಪ್ರಾಯಗಳನ್ನು ನಿಮ್ಮ ಮುಂದೆ ಇರಿಸುವೆನು.

ಒಂದು ಮಸ್‌ಜಿದ್ ಉದ್ಘಾಟನೆ ಸಂದರ್ಭದಲ್ಲಿ ಸ್ಪೈನ್ ದೇಶದ ಒಬ್ಬ ಕ್ರೈಸ್ತ ಹೇಳಿದರು: ನನ್ನ ಒಬ್ಬ ಪುತ್ರ ಕೆಲವು ವರ್ಷಗಳ ಹಿಂದೆ ಅಹ್ಮದಿಯಾದನು. ಆಗ ನಾನು ಬಹಳ ಗಾಬರಿಗೊಂಡೆನು. ನಾನು ಒಬ್ಬ ಕೆಥೋಲಿಕ್ ಕ್ರೈಸ್ತನಾಗಿದ್ದೇನೆ. ನಾನು ನನ್ನ ಧರ್ಮಕ್ಕೆ ಬದ್ಧನಾಗಿದ್ದೇನೆ. ನನ್ನ ಮಗ ಎಲ್ಲಿಗೆ ತಲಪಿದ ಎಂದು ನಾನು ಬಹಳ ದುಃಖದಿಂದ ಇದ್ದೆನು. ಇಸ್ಲಾಮ್ ಹಾನಿಕಾರಕ ಧರ್ಮವೆಂದು ನಾನು ಭಾವಿಸಿದ್ದೆ. ಈ ದಿನ ನಾನು ನಿಮ್ಮ ಖಲೀಫರ ಭಾಷಣಗಳನ್ನು ಆಲಿಸಿದೆ. ನನಗೆ ವಾಸ್ತವಿಕ ಶಾಂತಿಯ ಅನುಭವವಾಯಿತು. ನನ್ನ ಮಗ ಒಳ್ಳೆಯ ಸ್ಥಳದಲ್ಲಿಯೇ ಇದ್ದಾನೆ ಎಂದು ನನಗೆ ಸಮಾಧಾನವಾಯಿತು.

ಕೆರೋಲಾ ಎಂಬ ಓರ್ವ ಮಹಿಳೆ ಹೇಳಿದರು: ನಿಮ್ಮ ಖಲೀಫರು ಇಸ್ಲಾಮ್ ಶಾಂತಿಯ ಧರ್ಮ ಎಂದು ಪದೇ ಪದೇ ಹೇಳುತ್ತಾ ಇರುವುದರಿಂದ ನನಗೆ ಖೇದವಾಯಿತು. ಆದರೆ ಇಂದು ಲೋಕದಲ್ಲಿ ಇಸ್ಲಾಮ್ ವಿರುದ್ಧ ತಪ್ಪು ಪ್ರಚಾರ ನಡೆಯುತ್ತಾ ಇರುವುದರಿಂದ ಖಲೀಫರು ಈ ವಿಷಯವನ್ನು ಪದೇ ಪದೇ ಪ್ರಸ್ತಾಪಿಸುವುದು ಆವಶ್ಯಕವಾಗುತ್ತದೆ. ಇಸ್ಲಾಮ್ ಶಾಂತಿಯನ್ನು ಪ್ರಚಾರ ಮಾಡುವ ಧರ್ಮವಾಗಿದೆ ಎಂದು ನಿಮ್ಮ ಖಲೀಫರು ಬಹಳ ಸೂಕ್ಷ್ಮವಾಗಿ ವಿವರಿಸಿದರು. ಅವರು ಹೇಳಿದುದರ ವಿರುದ್ಧವಾಗಿ ಸಾಕ್ಷ್ಯಾಧಾರ ನೀಡಲು ಯಾರಿಗೂ ಸಾಧ್ಯವಿಲ್ಲ. ಖಲೀಫರು ನೀಡಿದ ಸಂದೇಶ ಸರಳವಾಗಿದೆ. ಪ್ರತಿಯೊಬ್ಬರು ಪರಸ್ಪರ ಆಲಿಂಗನ ಮಾಡಬೇಕು, ಪರಸ್ಪರ ಪ್ರೀತಿಯಿಂದ ಜೀವಿಸಬೇಕು ಎಂದು ಉಪದೇಶ ನೀಡಿದರು. ಅವರು ಹೀಗೂ ಹೇಳಿದರು: ನನಗೆ ಅಹ್ಮದಿಯಾ ಮಸ್‌ಜಿದ್ ನಿರ್ಮಾಣದ ಬಗ್ಗೆ ಆಕ್ಷೇಪವೇನೂ ಇಲ್ಲ. ಆದರೆ ಒಂದು ವಿಷಯದ ಬಗ್ಗೆ ದುಃಖವಿದೆ. ಮಸ್‌ಜಿದ್ ಮತ್ತು ಚರ್ಚ್ ಆರಾಧನಾಲಯಗಳಾಗಿವೆ. ಅವುಗಳ ಸ್ಥಾನ ಒಂದೇ ಆಗಿದೆ. ಆದರೆ ಚರ್ಚ್‌ಗಳನ್ನು ನಗರದ ಕೇಂದ್ರ ಸ್ಥಳಗಳಲ್ಲಿ ನಿರ್ಮಿಸಲು ಅನುಮತಿ ದೊರಕುತ್ತದೆ. ಆದರೆ ಮಸ್‌ಜಿದ್ ನಗರದ ಹೊರವಲಯದಲ್ಲಿ ನಿರ್ಮಿಸಲು ಅನುಮತಿಸಲಾಗುತ್ತಿದೆ. ನಮಾಝ್ ಅನುಷ್ಠಿಸಲು ದೂರ ಹೋಗ ಬೇಕಾಗುತ್ತದೆ. ಮುನ್ಸಿಪಲ್ ಕೌನ್ಸಿಲ್ ನಗರದೊಳಗೆ ಮಸ್‌ಜಿದ್ ನಿರ್ಮಿಸಲು ಅನುಮತಿ ಏಕೆ ನೀಡುವುದಿಲ್ಲ ಎಂದು ನನಗೆ ದುಃಖವಾಗುತ್ತದೆ ಎಂದು ಹೇಳಿದರು.

ಈಗ ಎಂತಹ ಜನರಿದ್ದಾರೆಂದರೆ ಮೊದಲು ಮಸ್‌ಜಿದ್ ನಿರ್ಮಾಣವನ್ನು ವಿರೋಧಿಸುತ್ತಿದ್ದವರು ಈಗ ಬೆಂಬಲ ನೀಡಲು ಮುಂದಾಗುತ್ತಿದ್ದಾರೆ. ಇಂತಹ ಸಮಾರಂಭಗಳ ಕಾರಣದಿಂದ ಅವರು ಇಂತಹ ಮನೋಭಾವ ಹೊಂದುತ್ತಿದ್ದಾರೆ. ನಮ್ಮ ಮಸ್‌ಜಿದ್‌ಗಳು ಸಹ ನಗರದ ಒಳಗೆ ನಿರ್ಮಿಸಲ್ಪಡಬೇಕು ಎಂದು ಅವರು ಅಭಿಪ್ರಾಯಪಡುತ್ತಾರೆ.

ಒಂದು ನಗರದ ಮೇಯರ್ ಹೇಳಿದರು: ನಿಮ್ಮ ಜಮಾಅತ್ ಬಗ್ಗೆ ನನಗೆ ತಿಳಿದಿದೆ ಎಂದು ನಾನು ಅಭಿಮಾನ ಹೊಂದಿದ್ದೆ. ಆದರೆ ನನಗೆ ಈ ದಿನ ಇಸ್ಲಾಮ್ ಬಗ್ಗೆ ಮತ್ತು ಇಸ್ಲಾಮೀ ಸಹಾನುಭೂತಿಯಿಂದ ನೀವು ಲೋಕದಾದ್ಯಂತ ನೀಡುವ ನೆರವು ಬಗ್ಗೆ ಕಲಿತುಕೊಳ್ಳಲು ಈ ದಿನ ಸಾಧ್ಯವಾಯಿತು. (ಇದರ ಬಗ್ಗೆ ನಾನು ವಿವರಿಸಿದ್ದೆ). ಇಸ್ಲಾಮ್ ಧರ್ಮ ಚರ್ಚ್‌ಗಳನ್ನು ಸಂರಕ್ಷಿಸುವ ಬಗ್ಗೆ ಉಪದೇಶಿಸುತ್ತದೆ ಮತ್ತು ಇತರ ಎಲ್ಲಾ ಧರ್ಮಗಳ ಅನುಯಾಯಿಗಳನ್ನು ರಕ್ಷಿಸುವ ಉಪದೇಶ ನೀಡುತ್ತದೆ ಎಂದು ಖಲೀಫರು ಹೇಳಿದಾಗ ನನಗೆ ಬಹಳ ಸಂತೋಷವಾಯಿತು.

ಒಬ್ಬ ಅತಿಥಿ ಮಿಸ್ಟರ್ ಸ್ಟೀಫನ್ ಎಂಬವರು, ಈ ದಿನ ನಾನು ಇಸ್ಲಾಮ್ ಧರ್ಮದ ಮೂಲ ತತ್ವಗಳನ್ನು ಕಲಿತೆನು ಎಂದು ಹೇಳಿದರು. ಇನ್ನೋರ್ವ ಅತಿಥಿ ಮಹಿಳೆ ಹೇಳಿದರು: ಖಲೀಫರ ಭಾಷಣ ಆಲಿಸಿದೆ. ನೆರೆಹೊರೆಯವರ ಬಗ್ಗೆ ಇಷ್ಟು ಶ್ರೇಷ್ಠ ಉಪದೇಶ ಇದರ ಮೊದಲು ಎಂದೂ ನಾನು ಆಲಿಸಲಿಲ್ಲ. ಖಲೀಫರು ಹೇಳಿದ ಹಾಗೆ ನೆರೆಹೊರೆಯವರ ಹಕ್ಕುಗಳನ್ನು ಈಡೇರಿಸಿ ಕೊಡುವುದಾದರೆ ಲೋಕವು ಶಾಂತಿದಾಮವಾಗುವುದು. ಖಲೀಫರು ಹೇಳಿದರು: ನಿಮ್ಮ ಹಕ್ಕುಗಳನ್ನು ಆವಶ್ಯಪಡುವುದಕ್ಕೆ ಬದಲಾಗಿ ಅನ್ಯರ ಹಕ್ಕುಗಳನ್ನು ಈಡೇರಿಸಿ ಕೊಡುವ ಬಗ್ಗೆ ಪ್ರಯತ್ನಿಸಿರಿ ಎಂದು. ಇದು ಶಾಂತಿ ಸ್ಥಾಪನೆಗೆ ಪರಿಪೂರ್ಣ ಉಪದೇಶವಾಗಬಲ್ಲದು.

ಒಬ್ಬ ಜರ್ಮನ್ ಹೇಳಿದರು: ಸ್ತ್ರೀ ಪುರುಷರು ಪರಸ್ಪರ ಹಸ್ತದಾನ ಮಾಡುವ ಬಗ್ಗೆ ಖಲೀಫರು ಬಹಳ ವಿಶದವಾಗಿ ವಿವರಿಸಿದ್ದಾರೆ. ಅವರ ಭಾಷಣ ಆಲಿಸಿದುದು ನನಗೆ ಅಭಿಮಾನಾರ್ಹವಾಗಿದೆ. ಅವರ ಸಾಕ್ಷ್ಯಾಧಾರಗಳನ್ನು ತಿರಸ್ಕರಿಸಲಾಗದು. ಶಾಂತಿಪ್ರಿಯ ಮತ್ತು ಸಹಿಷ್ಣುತೆ ಭರಿತ ಸಮಾಜದಲ್ಲಿ ನಾವು ಪರಸ್ಪರ ನಂಬಿಕೆಗಳ ಬಗ್ಗೆ ಗೌರವ ನೀಡಬೇಕು ಎಂದು ಖಲೀಫರು ಹೇಳಿದ್ದು ಸಂಪೂರ್ಣ ಸರಿಯಾಗಿವೆ ಎಂದು ಹೇಳಿದರು.

ಒಂದು ವಿಷಯ ನಾವು ಯಾವಾಗಲೂ ನೆನಪಿನಲ್ಲಿ ಇಡಬೇಕು. ಅದೇನೆಂದರೆ, ನಾವು ನಮ್ಮ ಧರ್ಮದ ತತ್ವಗಳ ಬಗ್ಗೆ ಮತ್ತು

ಸಂಪ್ರದಾಯಗಳ ಬಗ್ಗೆ ಅನ್ಯರೊಂದಿಗೆ ಮಾತನಾಡುವಾಗ ಬಹಳ ಜಾಣ್ಮೆಯಿಂದ ವರ್ತಿಸಬೇಕು. ನಮ್ಮ ವಿಶ್ವಾಸವೇನೆಂದು ಅವರಿಗೆ ತಿಳಿಸಿಕೊಡಬೇಕು. ಅದರೊಂದಿಗೆ ಅವರ ಭಾವನೆಗಳಿಗೆ ನೋವುಂಟಾಗದಿರಲು ಸಹ ಜಾಗರೂಕರಾಗಿರಬೇಕು. ನಾವು ನೆನಪಿಡಬೇಕಾದುದೇನೆಂದರೆ ನಾವು ಬಲತ್ಕಾರದಿಂದ ಯಾರನ್ನೂ ನಮ್ಮ ಮಾತನ್ನು ಅಂಗೀಕರಿಸುವಂತೆ ಮಾಡಬಾರದು. ಅದೇ ವೇಳೆ ನಾವು ನಮ್ಮ ಧರ್ಮ ತತ್ವಗಳನ್ನು ಸಹ ಕೈಬಿಡಬಾರದು. ಧರ್ಮಕ್ಕೆ ಸಂಬಂಧಿಸಿ ನಾವು ನಾಚಿಕೆ ಪಡಬೇಕಾದ ಅಗತ್ಯವಿಲ್ಲ. ಇಸ್ಲಾಮ್ ತತ್ವಗಳು ಎಷ್ಟು ಶ್ರೇಷ್ಠ ತತ್ವಗಳೆಂದರೆ ಯಾವುದೇ ಅಹ್ಮದಿ ಹುಡುಗ, ಹುಡುಗಿ, ಪುರುಷ ಮತ್ತು ಮಹಿಳೆ, ಕೀಳರಿಮೆ ಹೊಂದಬೇಕಾದ ಅಗತ್ಯವಿಲ್ಲ. ನಾವು ಲೋಕವನ್ನು ಇಸ್ಲಾಮಿನ ಪತಾಕೆಯ ಕೆಳಗೆ ತರಲು ಬಯಸುವುದಾದರೆ ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿ ನಮ್ಮ ಕ್ರಿಯಾತ್ಮಕ ಉದಾಹರಣೆ ತೋರಿಸಬೇಕು ಮತ್ತು ಧೈರ್ಯದಿಂದ ವರ್ತಿಸಬೇಕು. ಯಾವುದೇ ಕೀಳರಿಮೆ ಹೊಂದದೆ ಇಸ್ಲಾಮೀ ತತ್ವಗಳ ಅತ್ಯಂತ ಚಿಕ್ಕ ಭಾಗಗಳನ್ನೂ ಸಹ ಅನುಷ್ಠಾನಕ್ಕೆ ತನ್ನಿರಿ. ನೀವು ಅವರೊಂದಿಗೆ ಹೇಳಿರಿ, ಯುರೋಪಿಗೆ ಆಗಮಿಸಿಯೂ ನಮಗೆ ಇಸ್ಲಾಮೀ ತತ್ವಗಳ ಶ್ರೇಷ್ಠತೆ ಬಗ್ಗೆ ಒಂದಿಷ್ಟು ಸಂಶಯ ಸಹ ಇಲ್ಲ ಎಂದು. ಇದೇ ರೀತಿ ಹುಡುಗಿಯರು ತಮ್ಮ ಪೋಷಾಕಿನ ಮತ್ತು ಪರದೆಯ ಬಗ್ಗೆ ಗಮನವಿರಿಸಬೇಕು. ತಮ್ಮ ಲಜ್ಜೆ ಮತ್ತು ಪರಿಶುದ್ಧತೆಗೆ ಹಾನಿಯುಂಟಾಗದಂತೆ ನೋಡಿಕೊಳ್ಳಬೇಕು. ಲಜ್‌ನ ವಿಭಾಗವು ಇದರ ಬಗ್ಗೆ ವಿಶಿಷ್ಟ ಗಮನ ಹರಿಸಬೇಕು. ಅದೇ ರೀತಿ ಖುದ್ದಾಮುಲ್ ಅಹ್ಮದಿಯಾ ಸಹ ಖುದ್ದಾಮ್‌ಗಳ ತರಬೇತಿ ಬಗ್ಗೆ ವಿಶಿಷ್ಟವಾಗಿ ಗಮನ ಹರಿಸಬೇಕು. ಅನ್‌ಸಾರುಲ್ಲಾಹ್ ಸಹ ತಮ್ಮ ಹೊಣೆಗಾರಿಕೆಗಳ ಬಗ್ಗೆ ನಿರ್ಲಕ್ಷ್ಯತೆ ಹೊಂದಬಾರದು. ಎಲ್ಲ ವಿಭಾಗಗಳು ಮತ್ತು ಜಮಾಅತಿನ ನಿಝಾಮ್ ಮತ್ತು ಜಮಾಅತಿನ ವ್ಯಕ್ತಿಗಳು ಜಮಾಅತಿನ ಅನುಷ್ಠಾನ ಕರ್ಮಗಳ ಬಲಹೀನತೆಗಳನ್ನು ಸ್ವತಃ ತಮ್ಮ ಮುಂದೆ ಇರಿಸಿ ತಮ್ಮ ತಮ್ಮ ತರಬೇತಿಯ ಕಾರ್ಯಕ್ರಮಗಳನ್ನು ರೂಪಿಸಬೇಕು. ಮತ್ತು ಅವುಗಳಿಂದ ಉತ್ತಮ ಪರಿಣಾಮ ಉಂಟಾಗಲು ಪ್ರಯತ್ನಿಸಬೇಕು. ಅಲ್ಲಾಹನು ನಮಗೆಲ್ಲರಿಗೂ ಹೀಗೆ ಮಾಡುವ ಭಾಗ್ಯ ದಯಪಾಲಿಸಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*at BaithuSubuh, Frankfurt, Germany on 09-09-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email*:** *khutuba.kannada@gmail.com*

**You can find all the Sermons archived at**: www.alislam.org/friday-sermon